ಲೇಖಕರೊಬ್ಬರು, 'ನನ್ನ ಗೌರವ ಸಂಭಾವನೆ ಇನ್ನೂ ಬಂದಿಲ್ಲ' ಎಂದು ಆಡಿದ ಏರುದನಿಯ ಆರೋಪದ ಮಾತುಗಳು ನಾವಡರನ್ನು ಘಾಸಿಗೊಳಿಸಿದವು. ಮರುದಿನ ನಾನು ಕಲಬುರ್ಗಿಯವರಿಗೆ ಫೋನ್ ಮಾಡಿದೆ. 'ಸರ್ ನಾನು ಇದುವರೆಗೆ ನಿಮ್ಮಿಂದ ಏನೂ ಕೇಳಿಲ್ಲ. ಇಂದು ಒಂದು ಮಾತು ಕೇಳ್ತೀನಿ, ನೀವು ಇಲ್ಲ ಎನ್ನಬಾರದು ಸರ್' ಎಂದು ಆಡುತ್ತಿರುವಾಗಲೇ, 'ನೀ ಏನ ಕೇಳಕ್ಹತ್ತಿ ನಂಗಾ ಗೊತ್ತದ. ನಾವಡನ ಬಿಟ್ಟುಕೊಡಿ ಅಂತ ಹೌದೋ ಅಲ್ಲೋ. ಅದೊಂದು ಕೇಳಬೇಡ. ಮತ್ತೇನಾದ್ರೂ ಇದ್ರೆ ಹೇಳು' ಎಂದು ತಮ್ಮ ಪ್ರೀತಿಯ ಹಕ್ಕಿನಲ್ಲೇ ನನ್ನ ಬಾಯಿ ಮುಚ್ಚಿಸಿದರು.

ಕಲಬುರ್ಗಿಯವರ ಜೊತೆ ಮಾತಲ್ಲಿ ಅವರು ಮತ್ತೆ ಮತ್ತೆ ಆಡುತ್ತಿದ್ದುದು, 'ನೀ ವಿಶ್ವವಿದ್ಯಾಲಯದೊಳಗ ಇರಬೇಕಿತ್ತಾ. ಯಾಕ ಹಿಂಗಾತು? ಖರೆ ಎಂದ್ರ ವಿಶ್ವವಿದ್ಯಾಲಯದ ಒಳಗಿರಬೇಕಾದವರು ಹೊರಗಿದಾರ. ಹೊರಗಿರಬೇಕಾದವರು ಒಳಗಿದಾರ... ನೀ ಬಾಳ ಅದೃಷ್ಟಹೀನ ಇದ್ದಿ' ಎನ್ನುವಾಗ ಅವರ ಮುಖಭಾವ ಕನಲಿ ದನಿ ಬದಲಾಗಿ ಕಟುವಾಸ್ತವವನ್ನು ತೆರೆದಿಡುವ ಪರಿಯಲ್ಲಿ ಅವರ ನ್ಯಾಯ ನಿಷ್ಠುರಿತನವನ್ನು ಕಂಡಿದ್ದೆ. 'ಯಾಕ್ ಸರ್ ಹಾಗಂತೀರಿ ನಾವಡ ಅಂಥವರು ನನ್ನ ಸಂಗಾತಿಯಾಗಿದ್ದಾರೆ, ಪ್ರತಿಭಾವಂತ ಮಕ್ಕಳಿದ್ದಾರೆ, ನಿಮ್ಮಂತ ಶ್ರೇಷ್ಠ ಗುರು ಇದ್ದಾರೆ. ಅದೃಷ್ಟ ಅಂದರೆ ದೊಡ್ಡ ಪಗಾರ ಪಡೆಯುವುದೇನು, ಸರ್' ಎಂದು ಮರು ಪ್ರಶ್ನೆ ಇಟ್ಟಾಗ ನಗೆ ತುಂಬಿದ ಭಾವದಲ್ಲಿ, 'ಅದೂ ಖರೇನೆ. ನಾವು ಮನೆಯಾಗ ಆಡ್ಕೋತೀವಿ ನಾವಡನದು ಒಂದು ಮಾದರಿ ಕುಟುಂಬ ಅದ ಅಂತ.'

ಕಲಬುರ್ಗಿಯವರು ನನಗೆ ತರಗತಿಯ ಗುರು ಅಲ್ಲ. ನನ್ನ ಬುದ್ಧಿ-ಭಾವ ಜಗತ್ತಿನ ಮಾರ್ಗದರ್ಶಕ. ಬೌದ್ಧಿಕ ಜಗತ್ತಿನಲ್ಲಿ ಅವರ ಸೂಕ್ಷ್ಮಗ್ರಹಿಕೆ, ಅಧ್ಯಯನಶೀಲತೆ, ದುಡಿಯುವ ಪ್ರವೃತ್ತಿ, ಮಂಡಿಸುವ ಕಟು ಸತ್ಯಗಳು ಒಂದು ಬೆಳಕಾಗಿ ಕಲಬುರ್ಗಿಯವರ ಪರಿಭಾಷೆಯಲ್ಲಿ ಹೇಳುವುದಾದರೆ ನನ್ನನ್ನು ಕೆಲಸಕ್ಕೆ ಹಚ್ಚಿದವು, ಭಾವ ಜಗತ್ತಿನೊಳಗೆ ನಿಂತು ಆಡುವುದಾದರೆ ಅವರ ಸರಳತೆ ಸಜ್ಜನಿಕೆ, ಕಿರಿಯರನ್ನು ಬೆನ್ನು ತಟ್ಟಿ ಬೆಳೆಸುವ ಬಗೆ, ಕೆಲಸ ಕೊಟ್ಟು ನಕ್ಷತ್ರಿಕನಂತೆ ಕಾಡಿ ಮಾಡಿಸುವ ವೈಖರಿ, ಮಾಡಿದ ಕೆಲಸಕ್ಕೆ ಆಡುವ ಮೆಚ್ಚು ನುಡಿ, ಎಲ್ಲವೂ ನನಗೆ ಆತ್ಮವಿಶ್ವಾಸದ ಸೊತ್ತಾದವು.

ಕಲಬುರ್ಗಿಯವರು ಒಬ್ಬ ಶ್ರೇಷ್ಠ ಸಂಶೋಧಕ, ಆಡಳಿತ ಕುಶಲಿ, ನ್ಯಾಯ ನಿಷ್ಠುರಿ ಎಲ್ಲಕ್ಕಿಂತ ಮುಖ್ಯವಾಗಿ ಸರಳ ಸಹೃದಯಿಯಾಗಿ, ಶುದ್ಧ ಚಾರಿತ್ರ್ಯವಂತರಾಗಿ ಮತ್ತೂ ದೊಡ್ಡವರು ಎಂಬುದನ್ನು ನಾನು ಕಂಡವಳು. ಕಲಬುರ್ಗಿ ಅಂದರೆ ಸರಳತೆಗೊಂದು ಪರ್ಯಾಯ. ಅದು ಅವರ ಬಟ್ಟೆಯಿರಬಹುದು, ಊಟ ಇರಬಹುದು, ಮಾತು ಇರಬಹುದು, ಬದುಕು ಇರಬಹುದು. ಕಲಬುರ್ಗಿಯವರು ಆಗಾಗ ಆಡುತ್ತಿದ್ದ ಮಾತು, 'ನನ್ನ ಅಪ್ಪ ಹೇಳೋನು ಅಂಬಲಿ, ಕಂಬಳಿ ಆಸ್ತಿ, ಮಿಕ್ಕಿದ್ದೆಲ್ಲ ಜಾಸ್ತಿ' ಅಂತ. ಈ ನೆಲೆಯಲ್ಲಿ ಕಲಬುರ್ಗಿಯವರು ಪಿತೃವಾಕ್ಯ ಪರಿಪಾಲಕ. ಅವರೆಂದೂ ಐಷಾರಾಮಿ ಬದುಕು ಬಯಸಿದವರಲ್ಲ, ಬದುಕಿದವರಲ್ಲ. ಒಬ್ಬ ಕುಲಪತಿಗೆ ಸಿಗುವ ವಿಐಪಿ ಸೌಲಭ್ಯ ಸವಲತ್ತುಗಳನ್ನು ಎಂದೂ ಬಳಸಿದವರಲ್ಲ. ಒಮ್ಮೆ ನಾವಡ ಅವರ ಬೆಂಗಳೂರು-ಹಂಪಿ ರೈಲು ಪ್ರಯಾಣದಲ್ಲಿ ಕುಲಪತಿ ಕಲಬುರ್ಗಿಯವರೂ ಅದೇ ಎರಡನೇ ದರ್ಜೆಯ ಬೋಗಿಯಲ್ಲಿದ್ದರು. 'ಏನ್ ಸರ್ ನೀವಿಲ್ಲಿ?' ನಾವಡರು ಕುತೂಹಲದಿಂದ ಕೇಳಿದಾಗ, 'ಸಂಸ್ಥೆಯ ಹಣವನ್ನು ಸ್ವಂತದಂತೆ ಖರ್ಚು ಮಾಡಬೇಕು. ನನಗೆ ಇದೇ ಆರಾಮ' ಎಂದುದನ್ನು ನಾವಡರು ಹಲವು ಬಾರಿ ನೆನಪಿಸಿಕೊಳ್ಳುತ್ತಾರೆ.

ಕಲಬುರ್ಗಿಯವರು ಕಾರ್ಯಾಂತೇ ನಿಷ್ಪ್ರಯೋಜಕಃ ಎಂಬ ತತ್ವದಿಂದ ಬಹಳ ದೂರ. ಅವರು ಕನ್ನಡ ವಿ.ವಿ. ಕುಲಪತಿ ಆಗಿದ್ದ ದಿನಗಳಲ್ಲಿ ಮತ್ತು ಆಮೇಲೆ ಕೂಡ ನನ್ನನ್ನು ಹಲವೆಡೆ ವಿದ್ವತ್ ಲೋಕಕ್ಕೆ ಪರಿಚಯಿಸಿದರು. ಸಂಘಟಕರು ವಿ.ವಿ. ಯಿಂದ ವಿದ್ವಾಂಸರ ಹೆಸರನ್ನು ಕೊಡಿ ಎಂದಾಗ ಕಲಬುರ್ಗಿಯವರು ನನ್ನ ಹೆಸರು ಸೂಚಿಸಿದ್ದನ್ನು ನಾನು ಬಲ್ಲೆ. 'ನಾ ಒಂದು ಹೆಸರು ಹೇಳ್ತೀನಿ ಆಕಿ ವಿ.ವಿ. ಒಳಗಿಲ್ಲ, ಹೊರಗಿದ್ದಾಳ, ಬಾಳ ಬುದ್ಧಿವಂತೆ ಛಲೋ ಮಾತಾಡ್ತಾಳ' ಎಂದು ಶಿಫಾರಸ್ಸು ಮಾಡಿಯೂ, ಒಂದೇ ಒಂದು ದಿನ ನಾ ನಿನ್ನ ಹೆಸರ ಹೇಳೀನಿ, ಮಾಡೀನಿ ಅನ್ನೋ ಮಾತನ್ನು ಆಡಿಲ್ಲ. ನಾನೇ ಪ್ರಸ್ತಾಪ ಮಾಡಿದಾಗಲೂ, 'ನೀ ಯೋಗ್ಯ ಇದ್ದಿ, ಕಾರ್ಯಕ್ರಮ ಹೆಂಗಾತು, ಹೇಳು' ಎಂದು ನಕ್ಕು ಮುಗಿಸುವರು. ಇದು ಕಲಬುರ್ಗಿಯವರ ವಿದ್ವತ್ ಪ್ರೀತಿಯ ಬಗೆ. 'ಹಂಪಿ ಉತ್ಸವ ನಿಮಿತ್ತ ಕನ್ನಡ ವಿ.ವಿ. 'ದಾಸಸಾಹಿತ್ಯ ಸಂಪುಟ' (ಸಾವಿರ ಕೀರ್ತನೆಗಳು)